## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.639/2025

| | | |
|---|---|---|
| ಸಾಕ್ಷಿದಾರರ ಹೆಸರು | ರವೀಂದ್ರ | ಸಿ.ಡಬ್ಲ್ಯು-6 |
| ತಂದೆಯ ಹೆಸರು | ಹೇಮಪ್ಪ | ಪಿ .ಡಬ್ಲ್ಯೂ-5 |
| ವಯಸ್ಸು | 27 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಪೇಟಿಂಗ್ | ದಿನಾಂಕಃ |
| ವಾಸಃ | ಗಾಂಧಿನಗರ, ಸಾಗರ | 29.04.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ಮತ್ತು 5 ರವರು ಗೊತ್ತು.

**2.** ನಿಪಿ-3, 4 ಮತ್ತು 7 ರಲ್ಲಿನ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ, ಸದರಿ ಸಹಿಗಳನ್ನು ನಿಪಿ-3(ಬಿ), ನಿಪಿ-4(ಬಿ) ಮತ್ತು ನಿಪಿ-7(ಬಿ) ಎಂದು ಗುರುತಿಸಲಾಯಿತು. ದಿನಾಂಕ 17.01.2025 ಮತ್ತು ದಿನಾಂಕ 19.01.2025 ರ ನೊಟೀಸ್ ಗಳನ್ನು ನಿಪಿ-10 ಮತ್ತು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಮತ್ತು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-5, 6, 8 ಮತ್ತು 9 ರ ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ-3 ಮತ್ತು 4 ರ ದಾಖಲೆಗಳಿಗೆ ಜನ್ನತ್ ನಗರದ ಹಾನಂಬಿ ರಸ್ತೆಯ ಹಿಂಭಾಗದಲ್ಲಿ ಚಾ.ಸಾ 1, 2 ಮತ್ತು ಆರೋಪಿತನ ನಡುವಿನ ಗಲಾಟೆಯ ಸಂಬಂಧ ಪೋಲಿಸರು ಮಹಜರ್ ಮಾಡಿದಾಗ ನಾನು ಮತ್ತು ಚಾ.ಸಾ 5 ರವರು ಮಾಡಿದ್ದೇವೆ. ಘಟನಾ ಸ್ಥಳವನ್ನು ಚಾ.ಸಾ 1 ರವರು ತೋರಿಸಿದರು. ಪಂಚನಾಮೆಯಡಿಯಲ್ಲಿ ನಾನು ಈಗ ನೋಡುತ್ತಿರುವ ಎಂಒ-1 ಮತ್ತು 2 ರ ಚಾಕು ಮತ್ತು ಕಲ್ಲನ್ನು ಅಮಾನತ್ತು ಪಡಿಸಿಕೊಂಡರು. ನಂತರ ದಿನಾಂಕ 19.01.2025 ರಂದು ನಿಪಿ-7 ರ ಪಂಚನಾಮೆಯಡಿಯಲ್ಲಿ ಚಾ.ಸಾ 1 ರವರು ಹಾಜರು ಪಡಿಸಿದ ನಿಪಿ-8 ಮತ್ತು 9 ರಲ್ಲಿ ಕಾಣುವ ಕಾರನ್ನು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡರು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಎ.ಬಿ ರವರಿಂದಃ-**

**1.** ನಿಪಿ-3 ಮತ್ತು 4 ರ ದಾಖಲೆಗಳಿಗೆ ಸಹಿ ಮಾಡುವಂತೆ ನನ್ನನ್ನು ಚಾ.ಸಾ 1 ರವರು ಕರೆದುಕೊಂಡು ಹೋದರು. ಗಲಾಟೆಯ ವಿಷಯವನ್ನು ನನಗೆ ಚಾ.ಸಾ 1 ರವರೇ ಹೇಳಿದರು.

ಚಾ.ಸಾ 1 ರವರ ಮನೆಗೆ ಪಂಚನಾಮೆಗೆ ಹೋಗುವ ಮೊದಲು ನಾನೇ ಹೋಗಿದ್ದೆ. ಅಲ್ಲಿಗೆ ಚಾ.ಸಾ 5 ರವರು ಸಹ ಬಂದಿದ್ದರು. ಸ್ಥಳ ಪಂಚನಾಮೆಗೆ ನಾನು, ಚಾ.ಸಾ 1, 2 ಮತ್ತು 5 ರವರು ಹೋಗಿದ್ದೆವು. ಪಂಚನಾಮೆ ಮತ್ತು ನಕ್ಷೆಗೆ ನಾನು ಸ್ಥಳದಲ್ಲಿಯೇ ಸಹಿ ಮಾಡಿದ್ದೇನೆ. ನಿಪಿ–5, 6, 8 ಮತ್ತು 9 ರ ಫೋಟೋಗಳಲ್ಲಿ ಚಾ.ಸಾ 1 ರವರು ಹೇಳಿದ ಕಾರಣ ನಿಂತಿದ್ದೇನೆ ಎಂದರೆ ಸರಿ. ಪಂಚನಾಮೆಗಳಿಗೆ ಪೋಲಿಸರು ಹೇಳಿದ ಮೇರೆಗೆ ನಾನು ಸಹಿ ಮಾಡಿದ್ದೇನೆ. ಮು.ಮಾಲು–1 ಮತ್ತು 2 ವಸ್ತುಗಳು ನಾವು ಘಟನಾ ಸ್ಥಳಕ್ಕೆ ಹೋದಾಗ ಅವು ಪೋಲಿಸರ ಬಳಿಯೇ ಇದ್ದವು. ನಮ್ಮ ಸಮಕ್ಷಮ ಯಾವುದೇ ಕಾರನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಚಾ.ಸಾ 1 ರವರ ಹೇಳಿಕೆ ಮೇರೆಗೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–8 ಮತ್ತು 9 ರಲ್ಲಿ ಕಾಣುವ ಕಾರನ್ನು ಅಮಾನತ್ತು ಪಡಿಸಿಕೊಂಡಾಗ ಚಾ.ಸಾ 2 ರವರು ಹಾಜರಿದ್ದ ಬಗ್ಗೆ ನನಗೆ ನೆನಪಿಲ್ಲ. ಸದರಿ ಕಾರಿಗೆ ಏನು ಜಕಂ ಆಗಿದೆ ಎಂದು ನನಗೆ ನಿಖರವಾಗಿ ಮಾಹಿತಿ ಇಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.